<u>ಅಸಲು ದಾವಾ ಸಂಖ್ಯೆ -**53/22**</u> ಡಿ.ಡಬ್ಲ್ಯೂ.**:-1**

ದಿನಾಂಕಃ **03.02.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ವಾದಿ ಪರ ವಕೀಲರಿಂದ :-</u>

ನನ್ನ ಪ್ರತಿವಾದಿ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತಿಲ್ಲ ಸಾಕ್ಷಿ ಮುಂದುವರೆದು ನನಗೆ ಓದಲು ಬರೆಯಲು ಬರುವುದಿಲ್ಲ. ನಾನು ಸಹಿ ಮಾಡುತ್ತೇನೆ. ವಾದಿಗಳು ಗೊತ್ತು. ನಮ್ಮ ಜಮೀನಿನ ಪಕ್ಕದಲ್ಲಿ ಹಳ್ಳ ಇರುತ್ತದೆ ಹಳ್ಳದ ನಂತರ ವಾದಿಗಳಿಗೆ ಸೇರಿದ ಜಮೀನು ಇರುತ್ತದೆ. **1** ನೇ ವಾದಿಯು ಮಾದನಹಳ್ಳಿ ಗ್ರಾಮದ ಸಿದ್ದಪ್ಪ ಬಿನ್ ಚನ್ನಬಸಪ್ಪರವರಿಂದ ದಾವಾ ಆಸ್ತಿಯನ್ನು **1975-76** ರ ಸಾಲಿನಲ್ಲಿ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸಾಕ್ಷಿಯು ಕ್ರಯ ಪತ್ರವನ್ನು ನಕಲು (ಪೋರ್ಜರಿ) ಮಾಡಿದ್ದಾರೆ ಎಂದು ನುಡಿಯುತ್ತಾರೆ. **1** ನೇ ವಾದಿಯು ಕ್ರಯ ಪತ್ರವನ್ನು ನಕಲು (ಪೋರ್ಜರಿ) ಮಾಡಿರುವ ವಿಚಾರ ನನಗೆ **2009-10** ನೇ ಸಾಲಿನಲ್ಲಿ ತಿಳಿದಿರುತ್ತದೆ. ಸದರಿ ವಿಚಾರ ನನಗೆ ತಾಲ್ಲೂಕು ಕಚೇರಿಯಲ್ಲಿ ದಾಖಲೆಗಳನ್ನು ತೆಗೆಸುತ್ತಿದ್ದಾಗ ತಿಳಿದು ಬಂದಿರುತ್ತದೆ. ಸದರಿ ವಿಚಾರ ನನಗೆ ಪಹಣಿ ಮತ್ತು ಮ್ಯುಟೇಷನ್ ದಾಖಲೆಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿಯು ನನ್ನ ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ. ದಾವಾ ಆಸ್ತಿಯ ಮೂಲತಃ ಮಾಲೀಕರು ಸಿದ್ದಪ್ಪ ಬಿನ್ ಕರಡಪ್ಪ. ಸಿದ್ದಪ್ಪ ಬಿನ್ ಕರಡಪ್ಪರವರಿಗೆ **4** ಜನ ಮಕ್ಕಳು ಅಂದರೆ ಉಜ್ಜಪ್ಪ, ಚನ್ನಬಸಪ್ಪ, ನಿಂಗಪ್ಪ ಮತ್ತು ಓರೆಗೌಡಪ್ಪ. ಚನ್ನಬಸಪ್ಪನ ಮಗನ ಸಿದ್ದಪ್ಪ. ಚನ್ನಬಸಪ್ಪನ ಮಗ ಸಿದ್ದಪ್ಪ **1** ನೇ ವಾದಿಯ ನಡುವೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಕ್ರಯ ಪತ್ರವನ್ನು ನಕಲು (ಪೋರ್ಜರಿ) ಮಾಡಿಕೊಂಡಿರುತ್ತಾರೆ. ಸಿದ್ದಪ್ಪನ **4** ಜನ ಮಕ್ಕಳಾದ ಉಜ್ಜಪ್ಪ, ಚನ್ನಬಸಪ್ಪ, ನಿಂಗಪ್ಪ ಮತ್ತು ಓರೆಗೌಡಪ್ಪರವರು ಈಗ ತೀರಿಕೊಂಡಿರುತ್ತಾರೆ. ಉಜ್ಜಪ್ಪನ ಮಗ ಈಶ್ವರಪ್ಪ, ನಿಂಗಪ್ಪ, ಓರೆಗೌಡಪ್ಪ ರವರು ದಿಃ **11-03-1979-80** ರಲ್ಲಿ ನೋಂದಾಯಿತ ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತಾರೆ. ಸಿದ್ದಪ್ಪನ ಹೆಂಡತಿ ಉಜ್ಜಮ್ಮ ನಮ್ಮ ವಾರಸುದಾರರು. ಉಜ್ಜಮ್ಮ ನನಗೆ ದೊಡ್ಡಮ್ಮನಾಗಬೇಕು. ಉಜ್ಜಮ್ಮ ನನ್ನ ತಂದೆಯ ಅಣ್ಣನ ಹೆಂಡತಿ. ನನ್ನ

ತಂದೆಯ ಹೆಸರು ತಿಮ್ಮಪ್ಪ, ನನ್ನ ಅಜ್ಜನ ಹೆಸರು ಚನ್ನಬಸಪ್ಪ ಮತ್ತು ಮುತ್ತಾತನ ಹೆಸರು ಸಿದ್ದಪ್ಪ. ಈಶ್ವರಪ್ಪ, ಓರೆಗೌಡಪ್ಪ, ನಿಂಗಪ್ಪರವರಿಗೆ ತಲಾ **4** ಎಕರೆ **5** ಗುಂಟೆ ಜಮೀನು ನೋಂದಾಯಿತ ಪಾಲು ವಿಭಾಗದ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಪಾಲು ವಿಭಾಗ ಪತ್ರದ ವಿಚಾರವನ್ನು ನನ್ನ ಪ್ರತಿವಾದ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.